## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಎಂ. ಲೋಕೇಶ್, ಸಹಾಯಕ ನಿರ್ದೇಶಕರು (ಗ್ರಾಮೀಣ ಉದ್ಯೋಗ) ಇವರನ್ನು ಸೇವೆಯಿಂದ ಅಮಾನತ್ತುಗೊಳಿಸುವ ಬಗ್ಗೆ - ಆದೇಶ.

ಓದಲಾಗಿದೆ:- 1) ಪೋಲೀಸ್ ಮಹಾನಿರ್ದೇಶಕರು, ಭ್ರಷ್ಟಚಾರ ನಿಗ್ರಹ ದಳ, ಬೆಂಗಳೂರು ಇವರ ಪತ್ರ ಸಂಖ್ಯೆ ಎಸಿಬಿ/ರಾಮನಗರ/ದೂ.ಅ.ವಿ /31/2016 ದಿನಾಂಕ 09/05/2017.

2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ರಾಮನಗರ ಇವರ ಪತ್ರ ಸಂಖ್ಯೆ ರಾಜಿಪಂ/ಸಿ8/ಆರ್-114/ 2016-17-743 ದಿನಾಂಕ 29/05/2017 - 05.06.2017.

*****

ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಪೋಲೀಸ್ ಮಹಾನಿರ್ದೇಶಕರು, ಭ್ರಷ್ಟಚಾರ ನಿಗ್ರಹ ದಳ, ಬೆಂಗಳೂರು ಇವರ ಪತ್ರ ದಿನಾಂಕ 09/05/2017ರಲ್ಲಿ ಶ್ರೀ ವಿ. ಸಂಪತ್, ಅಬ್ಬನಕೆರೆ, ಬಿಡದಿ ಹೋಬಳಿ, ರಾಮನಗರ ತಾಲ್ಲೂಕು ರವರು ಶ್ರೀ ಎಂ.ಲೋಕೇಶ್, ಸಹಾಯಕ ನಿರ್ದೇಶಕರು (ಗ್ರಾ.ಉ.), ತಾಲ್ಲೂಕು ಪಂಚಾಯಿತಿ, ಚನ್ನಪಟ್ಟಣ ಹಿಂದಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಇವರು ರಾಮನಗರ ತಾಲ್ಲೂಕು ಬಿಡದಿ ಹೋಬಳಿ ಬನ್ನಿಕುಪ್ಪೆ (ಬಿ) ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅವರಗೆರೆ ಸರ್ವೆ ನಂ.39/9ರಲ್ಲಿ 05 ಗುಂಟೆ ಜಮೀನಿಗೆ ಡಿಮ್ಯಾಂಡ್ ರಿಜಿಸ್ಟರ್‌ನಲ್ಲಿ 195/1 ವಿಸ್ತೀರ್ಣ 40*90 ಅಡಿ ಮತ್ತು 1295/2ರಲ್ಲಿ 90*35 ಅಡಿಗಳಿಗೆ 2009-2010ನೇ ಸಾಲಿನಲ್ಲಿ ಶ್ರೀಮತಿ ಬಿ ಸುಶೀಲ ರವರಿಗೆ ಅಕ್ರಮ ಖಾತೆ ಮಾಡಿಕೊಟ್ಟಿದ್ದು, ಈ ನಿವೇಶನಗಳ ಪೈಕಿ ನಕಲಿ ದಾಖಲಾತಿಗಳನ್ನು ಸೃಷ್ಟಿಸಿ 1305 ಅಡಿಗಳಷ್ಟು ಸರ್ಕಾರಿ ಗೋಮಾಳದ ಆಸ್ತಿಯನ್ನೂ ಸಹ ಸೇರಿಸಿ ಅಕ್ರಮವಾಗಿ ಖಾತೆ ಮಾಡಿ ಸರ್ಕಾರಕ್ಕೆ ವಂಚನೆ, ಮೋಸ ಮಾಡಿರುತ್ತಾರೆಂದು ಇವರ ವಿರುದ್ಧ ಕ್ರಮ ಕೈಗೊಳ್ಳುವಂತೆ ದೂರು ದಾಖಲಿಸಿದ್ದು, ಸದರಿ ದೂರಿನನ್ವಯ ವಿಚಾರಣೆ ಕೈಗೊಂಡ ಪೋಲಿಸ್ ನಿರೀಕ್ಷಕರು ಸಲ್ಲಿಸಿರುವ ವಿಚಾರಣಾ ವರದಿಯ ಪರಿಶೀಲನೆಯಿಂದ ಕೆಳಕಂಡ ಅಂಶಗಳು ಕಂಡುಬಂದಿವೆ:-

1) ಅವರಗೆರೆ ಸರ್ವೆ ನಂ.39ರಲ್ಲಿ 1984ನೇ ಸಾಲಿನಲ್ಲಿ ಶ್ರೀ ಸಿದ್ದಯ್ಯ ಬಿನ್ ಅದೇ 10 ಗುಂಟೆ ಜಮೀನನ್ನು ಅವರ ಮರಣದ ನಂತರ ಸರ್ವೆ ನಂ 39/9ರ 10 ಗುಂಟೆ ಜಾಗವು ಶ್ರೀಮತಿ ಚಿಕ್ಕಹೊಂಬಕ್ಕ ಮತ್ತು ಇತರರಿಗೆ ಪವತಿ ಜಂಟಿ ಖಾತೆ ಆಗಿರುತ್ತದೆ.

2) ಶ್ರೀಮತಿ ಬಿ. ಸುಶೀಲ ರವರು ಸದರಿ ಸರ್ವೆ ನಂ.39/9ರ 0-10 ಗುಂಟೆ ಪೈಕಿ 2ನೇ ಮಗ ಹನುಮಯ್ಯ ರವರಿಂದ ಅವರ ಭಾಗದ ಬಾಬ್ತು 0.5 ಗುಂಟೆ ಜಮೀನನ್ನು ಸಾಮಾನ್ಯ ಮೊಖ್ತಾರ್‌ನಾಮೆ ಅಧಿಕಾರ ಪತ್ರ (ಜಿ.ಪಿ.ಎ) ಆಧಾರದ ಮೇಲೆ ರಾಮನಗರ ಉಪ ನೋಂದಣಿ ಕಛೇರಿಯಲ್ಲಿ ದಿನಾಂಕ 29.11.2008 ರಂದು ನೋಂದಣಿ ಮಾಡಿಸಿರುವುದು ಇರುತ್ತದೆ. ಇದು ಕೇವಲ ಜಿಪಿಎ ನೋಂಣಿಯಾಗಿದ್ದು ಸದರಿ ಸರ್ವೆ ನಂ.39/9ರ ಜಮೀನನ್ನು ನಿಯಮದಂತೆ ಶುದ್ಧ ಕ್ರಯದ ಮೂಲಕ ಖರೀದಿಸಿರುವುದಿಲ್ಲವೆಂಬುದನ್ನು ಖಾತಾದಾರರಾದ ಶ್ರೀಮತಿ ಬಿ. ಸುಶೀಲ ರವರು ದೃಢೀಕರಿಸಿರುತ್ತಾರೆ.

3) ಅವರೆಗೆರೆ ಸರ್ವೆ ನಂ. 39/9ರ 0.10 ಗುಂಟೆ ಜಮೀನಿನ ಬಗ್ಗೆ ಪ್ರಸಕ್ತ ಸಾಲಿನಲ್ಲಿ ಕೂಡ ಖಾತೆಯು ಶ್ರೀಮತಿ ಚಿಕ್ಕಹೊಂಬಕ್ಕ ಮತ್ತು ಇತರರ ಹೆಸರಿನಲ್ಲಿಯೇ ಬರುತ್ತಿದ್ದು, ಖಾನೇಷುಮಾರಿ ಸಂಖ್ಯೆ 195/1, 195/2ರ ಬಗ್ಗೆ ಯಾವುದೇ ನಮೂದು ಇರುವುದಿಲ್ಲ ಇದೂ ಸಹ ಖಾನೇಷುಮಾರಿ ಸಂಖ್ಯೆ 195/1, 195/2ರ ಬಗ್ಗೆ ಸ್ವತ್ತುಗಳು ಕಂದಾಯ ಜಮೀನು ಎಂಬುದನ್ನು ದೃಢೀಕರಿಸುತ್ತದೆ.

4) ಸರ್ವೆ ನಂ 39/9ರ 0-05 ಗುಂಡೆ ಜಮೀನು ನಿಯಮಾನುಸಾರ ಶುದ್ಧಕ್ರಮದ ಮೂಲಕ ಹಸ್ತಾಂತರವಾಗದೇ ಇದ್ದರೂ ಜಿಪಿಎ ಆದಾರ ಮೇಲೆ ಅವರಗೆರೆ ಗ್ರಾಮದ ಖಾನೇಷುಮಾರಿ ಸಂಖ್ಯೆ 195/1 ಮತ್ತು 195/2ರ ರಂತೆ ಕ್ರಮವಾಗಿ ಖಾತೆ ಮಾಡಿಕೊಟ್ಟಿರುವುದು ದೃಢಪಟ್ಟಿರುತ್ತದೆ.

5) ಈ ಖಾನೇಷುಮಾರಿ ಖಾತೆಯ ಬಗ್ಗೆ 2009-10ರ ಸಾಲಿನ ಡಿಮ್ಯಾಂಡ್ ರಿಜಿಸ್ಟರ್‌ನಲ್ಲಿ ಖಾನೇಷುಮಾರಿ ಸಂಖ್ಯೆ 195/1ಮತ್ತು 195/2ರ ಬಗ್ಗೆ ಪುಟ ಸಂಖ್ಯೆ 180ರಲ್ಲಿ ನಮೂದು ಮಾಡಿದ್ದು ಅದೇ ಪುಟದಲ್ಲಿ ಖಾನೇಷುಮಾರಿ ಸಂಖ್ಯೆ 195/1ಕ್ಕೆ ತೆರಿಗೆ 2700/-ರೂ.ಗಳನ್ನು 21.01.2010, 2009-10ರ ಕಂದಾಯ ರಶೀದಿ ಸಂಖ್ಯೆ 29370ರ ಬುಕ್ ಸಂಖ್ಯೆ 588 ಹಾಗೂ ಖಾನೇಷುಮಾರಿ ಸಂಖ್ಯೆ 195/2ಕ್ಕೆ ತೆರಿಗೆ ರೂ.2,205/-ಗಳನ್ನು ರೂ.21.01.2010, 2009-10ರ ಕಂದಾಯ ರಶೀದಿ ಸಂಖ್ಯೆ 29371 ರ ಬುಕ್ ಸಂಖ್ಯೆ 588ರಲ್ಲಿ ನಮೂದು ಮಾಡಿರುವುದು ಇದ್ದು ಸರ್ವೆ ನಂ.39/9ರ ಕಂದಾಯ ಜಮೀನಿನ ಆಸ್ತಿಗೆ ಅಕ್ರಮವಾಗಿ ಖಾತೆ ಮಾಡಿಕೊಟ್ಟಿರುವುದು ಕಂಡುಬಂದಿರುತ್ತದೆ. ಈ ಖಾನೇಷುಮಾರಿ ಖಾತೆಯ ಮತ್ತು ಸದರಿ ಕಂದಾಯ ರಶೀದಿಯನ್ನು ಬರೆದಿರುವ ಅವಧಿಯಲ್ಲಿ ಪಂಚಾಯತಿಯ ಕಾರ್ಯದರ್ಶಿಯಾಗಿ ಶ್ರೀ ಎಂ.ಲೋಕೇಶ್ ರವರೇ ಕರ್ತವ್ಯ ನಿರ್ವಹಿಸಿರುತ್ತಾರೆ.

6) ಬನ್ನಿಕುಪ್ಪೆ ಗ್ರಾಮ ಪಂಚಾಯತ್ ಕಂದಾಯ ರಶೀದಿ ಪುಸ್ತಕ ಸಂಖ್ಯೆ 588ರ ರಶೀದಿ ಸಂಖ್ಯೆ 29370 ರಲ್ಲಿ ಖಾನೇಷುಮಾರಿ ಸಂಖ್ಯೆ 195/1ಕ್ಕೆ ತೆರಿಗೆ ರೂ.2,775/-ಗಳು ಹಾಗೂ ರಶೀದಿ ಸಂಖ್ಯೆ 29371 ರಲ್ಲಿ 195/2ಕ್ಕೆ ತೆರಿಗೆ ರೂ.2,280/-ಗಳ ತೆರಿಗೆ ಮತ್ತು ಖಾತೆ ಫೀಜನ್ನು 21.01.2010 ರಂದು ಪಡೆದಿರುವ ಬಗ್ಗೆ ರಶೀದಿಯನ್ನು ಕರವಸೂಲಿಗಾರ ಶ್ರೀ ಸಿ.ಶಿವಣ್ಣ ಎಂಬುವರು ಹಾಕಿದ್ದು, ಸದರಿ ರಶೀದಿಯಲ್ಲಿರುವ ಬರವಣಿಗೆ ಮತ್ತು ಸಹಿ ಸಹ ಕರವಸೂಲಿಗಾರ ಶ್ರೀ ಸಿ.ಶಿವಣ್ಣ ಎಂಬುವರದ್ದಾಗಿರುತ್ತದೆಂದು ಎದುರುದಾರರಾದ ಶ್ರೀ ಎಂ.ಲೋಕೇಶ್ ರವರೇ ತಮ್ಮ ಹೇಳಿಕೆಯಲ್ಲಿ ದೃಢೀಕರಿಸಿರುತ್ತಾರೆ

7) 2009-10ರ ತೆರಿಗೆಗಳ ವಸೂಲಿಯ ದಿನವಹಿ ರಿಜಿಸ್ಟ್ರರ್‌ನಲ್ಲಿ ದಿನಾಂಕ 21,01,2010 ರಂದು ಮೇಲ್ಕಂಡ ರಶೀದಿ ಸಂಖ್ಯೆ 29370 ಮತ್ತು 29371ರಲ್ಲಿ ಶ್ರೀಮತಿ ಬಿ ಸುಶೀಲ ರವರಿಂದ ರೂ.2,775/- ಮತ್ತು ರೂ.2,280/-ಗಳನ್ನು ವಸೂಲಿ ಮಾಡಿರುವ ಬಗ್ಗೆ ನಮೂದಿಸಿರುವುದು ಇರುತ್ತದೆ. ಸದರಿ ರಿಜಿಸ್ಟರ್ ಬರವಣಿಗೆ ಕೂಡ ಬಿಲ್ ಕಲೆಕ್ಟರ್ ಶ್ರೀ ಸಿ ಶಿವಣ್ಣ ರವರದ್ದಾಗಿರುತ್ತದೆಂದು ಎದುರುದಾರಾದ ಶ್ರೀ ಎಂ. ಲೋಕೇಶ್‌ರವರೇ ತಮ್ಮ ಹೇಳಿಕೆಯಲ್ಲಿ ದೃಢೀಕರಿಸಿರುತ್ತಾರೆ.

8) ಯಾವುದೇ ಕಂದಾಯ ಜಮೀನುಗಳನ್ನು ಗ್ರಾಮ ಠಾಣಾ ವ್ಯಾಪ್ತಿಗೆ ಸೇರ್ಪಡೆ ಮಾಡಲು ಸದರಿ ಕಂದಾಯ ಜಮೀನಿನ ಬಗ್ಗೆ ಕಂದಾಯ ಇಲಾಖೆಯ ಜಿಲ್ಲಾಧಿಕಾರಿಗಳು ಅಥವಾ ಎ.ಸಿ ರವರಿಂದ ಭೂ-ಪರಿವರ್ತನೆ ಆದೇಶವಾಗಿ ಬಿ.ಎಂ.ಆರ್.ಡಿ/ಬಿ.ಎಂ.ಐ.ಸಿ ಯಿಂದ ನಕ್ಷೆ ಅನುಮೋದನೆ ಆಗಬೇಕಾಗಿರುತ್ತದೆ ಮತ್ತು ಗ್ರಾಮ ಪಂಚಾಯತ್ ಸಾಮಾನ್ಯ ಸಭೆಯಲ್ಲಿ ಚರ್ಚಿಸಿ ಅನುಮೋದನೆ ಪಡೆಯಬೇಕಾಗಿರುತ್ತದೆ. ತದನಂತರ ನಕ್ಷೆಯಲ್ಲಿನ ವಿಸ್ತೀರ್ಣವನ್ನು ಆಧರಿಸಿ ಪಂಚಾಯತ್ ಮಟ್ಟದಲ್ಲಿ ಮೊದಲು ಮ್ಯೂಟೇಷನ್ ರಿಜಿಸ್ಟರ್‌ನಲ್ಲಿ ವಿವರಗಳನ್ನು ನಮೂದು ಮಾಡಿ ನಂತರ ಕರ ನಿರ್ಧಾರಣಾ ಪಟ್ಟಿಯನ್ನು ನಮೂದಿಸಬೇಕು ಆದರೆ ಸರ್ವೆ ನಂ. 39/9ರ 0-05 ಗುಂಟೆ ಜಮೀನನ್ನು ಗ್ರಾಮ ಠಾಣಾ ವ್ಯಾಪ್ತಿಗೆ ಒಳಪಟ್ಟಿರುವುದಿಲ್ಲ ಎಂದು ಮತ್ತು ಖಾನೇಷುಮಾರಿ ಸಂಖ್ಯೆ 195/1 ಮತ್ತು 195/2ರ ಆಸ್ತಿ ಜಾಗದಿಂದ ಗ್ರಾಮ ಠಾಣಾ ವ್ಯಾಪ್ತಿಯು ಅಂದಾಜು ಸುಮಾರು 250 ಮೀಟರ್ ಅಂತರದಲ್ಲಿದ್ದು ಈ ಮಧ್ಯೆಯಲ್ಲಿ ಬೇರೆ

ಯಾವುದೇ ಖಾನೇಷುಮಾರಿ ಸ್ವತ್ತುಗಳು ನೋಂದಿತವಾಗಿರುವುದಿಲ್ಲ ಎಂದು ಹಾಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರು ದೃಡೀಕರಿಸಿರುತ್ತಾರೆ.

9) ಅರ್ಜಿಯ ವಿಚಾರಣೆಯ ಸಂಬಂಧವಾಗಿ ಅವರೆಗೆರೆ ಗ್ರಾಮದ 2009-10ರ ಸಾಲಿನ ಮ್ಯೂಟೇಷನ್ ರಿಜಿಸ್ಟರ್ ಅನ್ನು ತಪಾಸಣೆ ಮಾಡಲಾಗಿ ಖಾನೇಷುಮಾರಿ ಸಂಖ್ಯೆ 195/1 ಮತ್ತು 195/2ರ ಬಗ್ಗೆ ಯಾವುದೇ ನಮೂದು ಇರುವುದಿಲ್ಲ ಅಲ್ಲದೇ ಸದರಿ ವರ್ಷದ ಮ್ಯೂಟೇಷನ್ ರಿಜಿಸ್ಟರ್ ಹಲವಾರು ಪುಟಗಳಿಗೆ ಕೇವಲ ಎಂ ಆರ್ ನಂಬರ್ ಬರೆದ ಖಾಲಿ ಬಿಟ್ಟಿದ್ದು ಸ್ವತ್ತಿನ ಬಗ್ಗೆ ನಮೂದುಗಳು ಇರುವುದಿಲ್ಲ.

10) ಅರ್ಜಿದಾರರು ಆರೋಪಿಸಿವಂತೆ ಅವರಗೆರೆ ಸರ್ವೆ ನಂ39/9 ಖಾನೇಷುಮಾರಿ ಸಂಖ್ಯೆ 195/1,195/2ಗೆ 5445 ಅಡಿಗಳಿಗೆ ಬದಲಾಗಿ 6750 ಅಡಿಗಳಗೆ ಅಂದರೆ ಹೆಚ್ಚುವರಿಯಾಗಿ 1305 ಅಡಿಗಳಷ್ಟು ಸರ್ಕಾರಿ ಗೋಮಾಳದ ಆಸ್ತಿಯನ್ನು ಶ್ರೀಮತಿ ಬಿ. ಸುಶೀಲ ರವರಿಗೆ ಖಾತೆ ಮಾಡಿಕೊಟ್ಟಿರುತ್ತಾರೆಂಬ ವಿಚಾರದಲ್ಲಿ ಹೆಚ್ಚುವರಿಯಾದ 1305 ಅಡಿಗಳಷ್ಟು ವಿಸ್ತೀರ್ಣದ ಜಾಗವು ಸರ್ಕಾರಿ ಗೋಮಾಳದ ಆಸ್ತಿಯಾಗಿರುತ್ತದೆ ಎಂಬುದನ್ನು ದೃಢೀಕರಿಸುವುದಕ್ಕೆ ಅರ್ಜಿ ವಿಚಾರಣೆಯ ವೇಳೆಯಲ್ಲಿ ಯಾವುದೇ ದಾಖಲೆಗಳು ದೊರೆತಿರುವುದಿಲ್ಲ. ಸದರಿ ಹೆಚ್ಚುವರಿ ಜಾಗದ ಬಗ್ಗೆ ಸಂಬಂಧಪಟ್ಟ ಕಂದಾಯ / ಮೋಜಣಿ ಅಧಿಕಾರಿಗಳಿಂದ ಸ್ಥಳ ಪರಿಶೀಲನೆ ಮತ್ತು ಅಳತೆ ಕಾರ್ಯ ನಡೆಸಿ ಮುಂದಿನ ತೀರ್ಮಾನಕ್ಕೆ ಬರಬೇಕಾಗಿರುತ್ತದೆ.

ಶ್ರೀ ಎಂ.ಲೋಕೇಶ್, ಸಹಾಯಕ ನಿರ್ದೇಶಕರು (ಗ್ರಾ.ಉ.), ತಾಲ್ಲೂಕು ಪಂಚಾಯಿತಿ, ಚನ್ನಪಟ್ಟಣ ಹಾಗೂ ಪ್ರಭಾರ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಚನ್ನಪಟ್ಟಣ ಇವರು 2009-10ನೇ ಸಾಲಿನಲ್ಲಿ ರಾಮನಗರ ತಾಲ್ಲೂಕು, ಬಿಡದಿ ಹೋಬಳಿಯ ಬನ್ನಿಕುಪ್ಪೆಯ ಗ್ರಾಮ ಪಂಚಾಯಿತಿ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಶ್ರೀಮತಿ ಚಿಕ್ಕಹೊಂಬಕ್ಕ ಮತ್ತು ಇತರರ ಹೆಸರಿನಲ್ಲಿದ್ದ ಅವರಗೆರೆ ಗ್ರಾಮ ಸರ್ವೇ ನಂ.39/9ರ 0.10ಗುಂಟೆ ಜಮೀನಿನ ಪೈಕಿ 0.05-ಗುಂಟೆ ಕಂದಾಯ ಜಮೀನನ್ನು ಶುದ್ಧ ಕ್ರಯದ ಮೂಲಕ ವರ್ಗಾವಣೆ ಆಗದೇ ಇದ್ದರೂ ಸಹ ಹಾಗೂ ಗ್ರಾಮ ಠಾಣಾ ವ್ಯಾಪ್ತಿಗೆ ಸೇರ್ಪಡೆ ಮಾಡಲು ನಿರ್ವಹಿಸಬೇಕಾದ ನಿಯಮಗಳನ್ನು ಪಾಲನೆ ಮಾಡದೇ ಜಿ.ಪಿ.ಎ.ಆಧಾರದ ಮೇಲೆ ಶ್ರೀಮತಿ ಬಿ. ಸುನಂದ ಕೋಂ. ಸಿ.ಸೋಮೇಗೌಡ, ಎಂಬುವವರಿಗೆ ಖಾನೇಷುಮಾರಿ ಸಂಖ್ಯೆ : 195/1 ಮತ್ತು 195/2 ರಂತೆ ಗ್ರಾಮ ಠಾಣಾಕ್ಕೆ ಸೇರ್ಪಡೆ ಮಾಡಿಕೊಂಡು ತಮ್ಮ ಅಧಿಕಾರ ವ್ಯಾಪ್ತಿಯನ್ನು ಮೀರಿ ನಿಯಮಬಾಹಿರವಾಗಿ ಅಕ್ರಮವಾಗಿ ಖಾತೆ ಮಾಡಿಕೊಟ್ಟು ಇಲಾಖಾ ನಿಯಮ ಉಲ್ಲಂಘನೆ ಮಾಡಿ ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದಾಗಿ ಪೋಲೀಸ್ ಮಹಾ ನಿರೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಬೆಂಗಳೂರು ಇವರು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿ, ರಾಮನಗರ ಇವರಿಗೆ ವರದಿ ಮಾಡಿರುತ್ತಾರೆ.

ಮೇಲೆ ಓದಲಾದ (2)ರ ಪತ್ರದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ರಾಮನಗರ ರವರು ಪೋಲೀಸ್ ಮಹಾನಿರೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಬೆಂಗಳೂರು ಇವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುತ್ತಾ, ಶ್ರೀ ಎಂ.ಲೋಕೇಶ್, ಸಹಾಯಕ ನಿರ್ದೇಶಕರು (ಗ್ರಾ.ಉ.), ತಾಲ್ಲೂಕು ಪಂಚಾಯಿತಿ, ಚನ್ನಪಟ್ಟಣ ಇವರು ತಮ್ಮ ಅಧಿಕಾರ ವ್ಯಾಪ್ತಿಯನ್ನು ಮೀರಿ ನಿಯಮಬಾಹಿರವಾಗಿ ಗ್ರಾಮ ಠಾಣಾಕ್ಕೆ ಸೇರಿದ ಜಾಗವನ್ನು ಅಕ್ರಮವಾಗಿ ಖಾತೆ ಮಾಡಿಕೊಟ್ಟು ಇಲಾಖಾ ನಿಯಮ ಉಲ್ಲಂಘನೆ ಮಾಡಿ, ಕರ್ತವ್ಯ ಲೋಪ ಎಸಗಿರುವುದು ಭ್ರಷ್ಟಾಚಾರ ನಿಗ್ರಹ ದಳವು ನಡೆಸಿದ ತನಿಖೆಯ ಪ್ರಾಥಮಿಕ ವಿಚಾರಣೆಯಿಂದ ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಸದರಿಯವರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

ಆದ್ದರಿಂದ ಸದರಿ ಪ್ರಕರಣದಲ್ಲಿ ಭಾಗಿಯಾಗಿರುವ ಶ್ರೀ ಎಂ.ಲೋಕೇಶ್, ಸಹಾಯಕ ನಿರ್ದೇಶಕರು (ಗ್ರಾ.ಉ.), ತಾಲ್ಲೂಕು ಪಂಚಾಯಿತಿ, ಚನ್ನಪಟ್ಟಣ ಹಾಗೂ ಪ್ರಭಾರ ಕಾರ್ಯನಿರ್ವಾಹಕ ಅಧಿಕಾರಿ,

..4..

ತಾಲ್ಲೂಕು ಪಂಚಾಯಿತಿ, ಚನ್ನಪಟ್ಟಣ ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ಬಾಕಿಯಿರಿಸಿ ಸೇವೆಯಿಂದ ಅಮಾನತ್ತುಗೊಳಿಸಲು ಸರ್ಕಾರವು ನಿರ್ಧರಿಸಿದೆ. ಅದರಂತೆ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಗ್ರಾಅಪ 180 ಕೆಎಸ್‌ಎಸ್ 2017
ಬೆಂಗಳೂರು, ದಿನಾಂಕ 26/10/2017.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಶ್ರೀ ಎಂ.ಲೋಕೇಶ್, ಸಹಾಯಕ ನಿರ್ದೇಶಕರು (ಗ್ರಾ.ಉ.), ತಾಲ್ಲೂಕು ಪಂಚಾಯಿತಿ, ಚನ್ನಪಟ್ಟಣ ಹಾಗೂ ಪ್ರಭಾರ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಚನ್ನಪಟ್ಟಣ ಇವರು ಈ ಹಿಂದೆ2009-10ನೇ ಸಾಲಿನಲ್ಲಿ ರಾಮನಗರ ತಾಲ್ಲೂಕು ಬಿಡದಿ ಹೋಬಳಿ ಬನ್ನಿಕುಪ್ಪೆ (ಬಿ) ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ನಿಯಮ ಉಲ್ಲಂಘನೆ ಮಾಡಿ ಅಕ್ರಮವಾಗಿ ಖಾತೆಮಾಡಿಕೊಟ್ಟು ಕರ್ತವ್ಯ ಲೋಪವೆಸಗಿದ್ದು, ಸರ್ಕಾರಿ ನೌಕರರಾಗಿ ಪೂರ್ಣ ಪ್ರಮಾಣದ ನಿಷ್ಠೆ ಮತ್ತು ಪ್ರಾಮಾಣಿಕತೆ ತೋರದೇ ಗಂಭೀರ ಸ್ವರೂಪದ ಕರ್ತವ್ಯ ಲೋಪ / ದುರ್ನಡತೆ ಎಸಗಿ ಕರ್ನಾಟಕ ನಾಗರೀಕ ಸೇವೆಗಳು (ನಡತೆ) ನಿಯಮಗಳು 1966ರ ನಿಯಮ 3 (1)ನ್ನು ಉಲ್ಲಂಘಿಸಿರುವುದು ದಾಖಲೆಗಳಿಂದ ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ, ಸದರಿ ದುರ್ನಡತೆಗೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆಯನ್ನು ಬಾಕಿಯಿಟ್ಟು, ಸದರಿಯವರನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 10 (1) (ಡಿ) ರನ್ವಯ ತಕ್ಷಣದಿಂದ ಜಾರಿಗೆ ಬರುವಂತೆ ಸೇವೆಯಿಂದ ಅಮಾನತ್ತುಪಡಿಸಿ ಆದೇಶಿಸಿದೆ.

ಅಮಾನತ್ತಿನ ಅವಧಿಯಲ್ಲಿ ಶ್ರೀ ಎಂ.ಲೋಕೇಶ್, ಸಹಾಯಕ ನಿರ್ದೇಶಕರು (ಗ್ರಾಉ) ಇವರು ಸಕ್ಷಮ ಪ್ರಾಧಿಕಾರದ ಅನುಮತಿ ಇಲ್ಲದೇ ಕೇಂದ್ರ ಸ್ಥಾನವನ್ನು ಬಿಡತಕ್ಕದ್ದಲ್ಲ ಹಾಗೂ ಕರ್ನಾಟಕ ನಾಗರೀಕ ಸೇವಾ ನಿಯಮಗಳು 1957ರ ನಿಯಮ 98ರ ಅನುಸಾರ ಜೀವನಾಧಾರ ಭತ್ಯೆಗೆ ಅವರು ಅರ್ಹರಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

26/10/17

(ಡಿ.ಎಸ್. ವಿಜಯ್),
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಬಿ & ಸಿ),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, (ಅ ಮತ್ತು ಇ) ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
3. ಅಪರ ಪೋಲೀಸ್ ಮಹಾನಿರ್ದೇಶಕರು, ಭ್ರಷ್ಟಾಚಾರ ನಿಗ್ರಹ ದಳ, ನಂ.49, ಖನಿಜ ಭವನ, ರೇಸ್ ಕೋರ್ಸ್, ಬೆಂಗಳೂರು 560 001.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ರಾಮನಗರ
5. ಪೋಲೀಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ನಂ.49, ಖನಿಜ ಭವನ, ರೇಸ್ ಕೋರ್ಸ್, ಬೆಂಗಳೂರು 560 001
6. ಪೋಲೀಸ್ ನಿರೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ರಾಮನಗರ ಜಿಲ್ಲೆ.
7. ಪೋಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ ಪೋಲೀಸ್‌ಠಾಣೆ, ಚಿಕ್ಕಬಳ್ಳಾಪುರ.
8. ಶ್ರೀ ಎಂ.ಲೋಕೇಶ್, ಸಹಾಯಕ ನಿರ್ದೇಶಕರು (ಗ್ರಾ.ಉ.), ತಾಲ್ಲೂಕು ಪಂಚಾಯಿತಿ, ಚನ್ನಪಟ್ಟಣ ಹಾಗೂ ಪ್ರಭಾರ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಚನ್ನಪಟ್ಟಣ – ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ರಾಮನಗರ ಇವರ ಮುಖಾಂತರ.
9. ಸರ್ಕಾರದ ಅಧೀನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, (ಸೇವೆಗಳು-ಎ & ಸ್ತ್ರೀಮರ) / ಗ್ರಾಮ ಪಂಚಾಯತ್
10. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ.
11. ಗ್ರಾ.ಅ.ಪಂ.ರಾಜ್ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ ಇವರ ಆಪ್ತ ಕಾರ್ಯದರ್ಶಿ/ ಆಪ್ತ ಸಹಾಯಕರಿಗೆ.
12. ಮಾಹಿತಿ ಕೇಂದ್ರ : ಹೆಚ್ಚುವರಿ ಪ್ರತಿ:ರಕ್ಷಾ ಕಡತ : ಕಂಪ್ಯೂಟರ್ ಸೆಲ್.